## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: 1) ಕಂಪ್ಲೆಂಟ್\ಉಪಲೋಕ್\ಎಂವೈಎಸ್\6608\2014
2) ಕಂಪ್ಲೆಂಟ್\ಉಪಲೋಕ್\ಎಂವೈಎಸ್\6609\2014
& 3) ಕಂಪ್ಲೆಂಟ್\ಉಪಲೋಕ್\ಎಂವೈಎಸ್\6610\2014\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 17/03/2018

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** ಸರ್ಕಾರಿ ನೌಕರರಾದ ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ 1)ತಹಶೀಲ್ದಾರಾಗಿದ್ದ ಶ್ರೀಮತಿ.ಅರುಣಪ್ರಭಾ, 2) ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಶ್ರೀ.ವೆಂಕಟೇಶ್, 3)ಆಹಾರ ಶಿರಸ್ತೇದಾರರಾಗಿದ್ದ ಶ್ರೀಮತಿ.ಬಿ.ಸಿ.ಚಿತ್ರಾ (ಪ್ರಸ್ತುತ ನಿವೃತ್ತ), 4) ಆಹಾರ ನಿರೀಕ್ಷಕರಾಗಿದ್ದ ಶ್ರೀ.ಜೆ.ಸುರೇಶ್, 5) ಆಹಾರ ನಿರೀಕ್ಷಕರಾಗಿದ್ದ ಶ್ರೀ.ಕೆಂಚೇಗೌಡ (ಪ್ರಸ್ತುತ ನಿವೃತ್ತ) ಮತ್ತು 7) ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ಸಗಟು ಕೇಂದ್ರದ ನಿರ್ವಾಹಕರಾಗಿದ್ದ ಶ್ರೀ.ಎಂ.ಜೆ.ಮಹದೇವ ರವರು ಕರ್ತವ್ಯ ಲೋಪ ಎಸಗಿರುವ ಬಗ್ಗೆ.

**********

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ಕಸಬಾ ಹೋಬಳಿ ಹಳೇ ಕೆಂಪಯ್ಯನ ಹುಂಡಿ ನಿವಾಸಿಗಳಾದ ಶ್ರೀ.ಎಂ.ಮಹದೇವಣ್ಣ ಬಿನ್ ಲೇ.ನಾಗನಮಾದೇಗೌಡ (ದೂರು ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\6608\2014), ಶ್ರೀ.ಕೆ.ಎಂ.ಪುಟ್ಟಸ್ವಾಮಿ ಬಿನ್ ಕೆ.ಸಿ.ಮರಿಗೌಡ (ದೂರು ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\6609\2014) ಮತ್ತು ಶ್ರೀ.ಕೆ.ಮುದ್ದೇಗೌಡ ಬಿನ್ ಕೆಂಪೇಗೌಡ (ದೂರು ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\6610\2014) [ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ] ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ಕಸಬಾ ಹೋಬಳಿ ಹಳೇ ಕೆಂಪಯ್ಯನ ಹುಂಡಿ ಗ್ರಾಮ ನ್ಯಾಯ ಬೆಲೆ ಅಂಗಡಿ ಸಂ.35ರ ಮಾಲೀಕರಾದ ಶ್ರೀ.ಎಂ.ಶಿವಪ್ರಸಾದ್ (ಎಲ್ಲಾ ದೂರಿನಲ್ಲೂ ದೂರುದಾರರುಗಳು ಎದುರುದಾರರೆಂದು ಹೇಳಿದ್ದಾರೆ) ರವರು ನಡೆಸುತ್ತಿದ್ದ ಅವ್ಯವಹಾರದ ಬಗ್ಗೆ ನೀಡಿದ ದೂರುಗಳನ್ನು ಒಟ್ಟಿಗೆ ಸೇರಿಸಿ, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಶ್ರೀ.ಎಂ.ಶಿವಪ್ರಸಾದ್ ರವರು ನ್ಯಾಯಬೆಲೆ ಅಂಗಡಿ ಸಂಖ್ಯೆ.35 ಅನ್ನು ಹಳೇ ಕೆಂಪಯ್ಯನ ಹುಂಡಿ ಯಲ್ಲಿ ನಡೆಸುತ್ತಿದ್ದು, ಅವರು ನಡೆಸುವ ಅವ್ಯವಹಾರದ ಬಗ್ಗೆ ಆಹಾರ ಇಲಾಖೆಯ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಅವರು ಪ್ರತಿ ತಿಂಗಳು ಬಡವರ ಅಕ್ಕಿಯನ್ನು ಕದ್ದು, ಕಾಳಸಂತೆಯಲ್ಲಿ ಮಾರಾಟ ಮಾಡಿ, ಸರ್ಕಾರ ಮತ್ತು ಸಮಾಜಕ್ಕೆ ದ್ರೋಹ ಮಾಡುತ್ತಿದ್ದು, ಅವರ ವಿರುದ್ಧ ಆಹಾರ ಇಲಾಖೆಯ ಅಧಿಕಾರಿಗಳಿಗೆ ದೂರು ನೀಡಿದ್ದರೂ, ಅವರಿಗೆ ಹೆದರಿಕೊಂಡು ಕ್ರಮ ಜರುಗಿಸಿಲ್ಲವೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿಯನ್ನು ಸಲ್ಲಿಸುವಂತೆ ಸಹಾಯಕ ಆಯುಕ್ತರು, ಮೈಸೂರು ಉಪ ವಿಭಾಗ ರವರನ್ನು ಕೇಳಲಾಗಿ, ಹಿರಿಯ ಉಪ ನಿರ್ದೇಶಕರು, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಮೈಸೂರು (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರು ತಮ್ಮ ದಿ:04/03/15ರ ವರದಿಯಲ್ಲಿ –

> ಹಳೇ ಕೆಂಪಯ್ಯನ ಹುಂಡಿ ಸರ್ಕಾರ ನ್ಯಾಯಬೆಲೆ ಅಂಗಡಿ ಸಂಖ್ಯೆ.35 (ಅಧಿಕಾರ ಪತ್ರ ಸಂ:6/99–2000) ಮಾಲೀಕರಾದ ಶ್ರೀ.ಎಂ.ಶಿವಪ್ರಸಾದ್ ಮತ್ತು ಅವರ ಸಹಚರರಾದ ಶ್ರೀ.ಬಿ.ಕುಮಾರ್ ಮತ್ತು ಶ್ರೀ.ಎಂ.ಬಸವರಾಜು ಎಂಬುವವರು ಹೊಸ ಕೆಂಪಯ್ಯನ ಹುಂಡಿಯ ಎಸ್.ರಾಮು ನ್ಯಾಯಬೆಲೆ ಅಂಗಡಿ ಸಂಖ್ಯೆ.36 (ಅಧಿಕಾರ ಪತ್ರ ಸಂ:30/94–95) ಸಂಬಂಧಿಸಿದಂತೆ ಅಕ್ಟೋಬರ್, 2012 ರಿಂದ ಜೂನ್, 2013 ರವರೆಗಿನ 9 ತಿಂಗಳ ಪಡಿತರವನ್ನು ಅಕ್ರಮವಾಗಿ ಎತ್ತುವಳಿ ಮಾಡಿ, ಸರ್ಕಾರ ನಿಗದಿಪಡಿಸಿದ ಪ್ರಮಾಣ ಮತ್ತು ಬೆಲೆಯಲ್ಲಿ ವಿತರಿಸದೇ ಪಡಿತರ ಚೀಟಿದಾರರಿಗೆ ಅವಶ್ಯವಾಗಿ ನೀಡಬೇಕಾಗಿರುವ ಬಿಲ್ ನೀಡದೇ, ~~ಪಡಿತರ ಚೀಟಿಗಳಲ್ಲಿ ದಾಖಲಿಸದೇ ಮತ್ತು ಅರ್ಹ ಪಡಿತರ ಚೀಟಿದಾರರಿಗೆ ಪಡಿತರ ವಿತರಿಸದೇ~~ ವಂಚಿಸಿರುವುದು ಮತ್ತು ನ್ಯಾಯಬೆಲೆ ಅಂಗಡಿ ವಹಿವಾಟಿಗೆ ಸಂಬಂಧಿಸಿದ ಲೆಕ್ಕಪತ್ರದಲ್ಲಿ ಅಕ್ರಮ ಎಸಗಿ, ಅವ್ಯವಹಾರ / ಅಕ್ರಮ / ಕಾಳಸಂತೆ ವಹಿವಾಟು ಮಾಡಿರುವುದು ಕಂಡು ಬಂದಿದೆ. ಅದರಂತೆ, ಹಳೇ ಕೆಂಪಯ್ಯನ ಹುಂಡಿಯ 1ನೇ ಎದುರುದಾರರ ನ್ಯಾಯಬೆಲೆ ಅಂಗಡಿಗೆ ಸಂಬಂಧಿಸಿದಂತೆ ಸರ್ಕಾರ ನೀಡಿದ ಪಡಿತರ ವಸ್ತುಗಳನ್ನು ಆಗಸ್ಟ್, 2011 ರಿಂದ ಡಿಸೆಂಬರ್, 2013ರ ಅವಧಿಯಲ್ಲಿ ನಿಯೋಜಿಸಿದ ಪಡಿತರ ಚೀಟಿದಾರರಿಗೆ ನಿಗದಿತ ಪ್ರಮಾಣ ಮತ್ತು ಬೆಲೆಯಲ್ಲಿ ವಿತರಿಸಿಲ್ಲ ಹಾಗೂ ಮೃತರಿಗೆ ಪಡಿತರ ನೀಡಿದಂತೆ ತೋರಿ, ಪಡಿತರ ದುರುಪಯೋಗ ಪಡಿಸಿಕೊಂಡಿರುವುದು ಮತ್ತು ಪಡಿತರ ಚೀಟಿದಾರರಿಗೆ ಅವಶ್ಯ ಬಿಲ್ ನೀಡದೇ ಸುಳ್ಳು ಲೆಕ್ಕ ಬರೆದಿರುವುದು ಕಂಡು ಬಂದಿದೆ. ತಾವು ಮಾಡಿದ ಅಕ್ರಮಗಳನ್ನು ಮುಚ್ಚಲು ಸರ್ಕಾರದ ದಾಖಲೆ ತಿದ್ದಿ ಸಾಕ್ಷ್ಯ ನಾಶ ಮಾಡಲು ಪ್ರಯತ್ನಿಸಿದ್ದಾರೆ. ಸದರಿಯವರ ವಿರುದ್ಧ ಕರ್ನಾಟಕ ಅಗತ್ಯ ವಸ್ತುಗಳು (ಸಾರ್ವಜನಿಕ ವಿತರಣಾ ಪದ್ಧತಿ ಆದೇಶ) 1992, ಕರ್ನಾಟಕ ಅಗತ್ಯ ವಸ್ತುಗಳು (ಲೆಕ್ಕಪತ್ರ ನಿರ್ವಹಣೆ, ದಾಸ್ತಾನು ಮತ್ತು ಬೆಲೆ ಪ್ರಕಟಣೆ ಆದೇಶ) 1981, ಕರ್ನಾಟಕ ಅಗತ್ಯ ವಸ್ತುಗಳ

ಪರವಾನಿಗೆ ಆದೇಶ, 1986, ಅಗತ್ಯ ವಸ್ತುಗಳ ಕಾಯಿದೆ ಹಾಗೂ ಭಾರತೀಯ ದಂಡ ಸಂಹಿತೆ ಕಲಂ 120ಬಿ, 201, 403, 409, 420, 465 ಮತ್ತು 468 ಅಡಿ ಪ್ರಕರಣ ದಾಖಲಿಸಲು ಶಿಫಾರಸ್ಸು ಮಾಡಿದೆ. ಮುಂದುವರೆದು, ಸದರಿ ಮೂವರು ಎಸಗಿದ ಅಕ್ರಮದ ಬಗ್ಗೆ ಸಾರ್ವಜನಿಕರು ದೂರು ಸಲ್ಲಿಸಿದರೂ, ಯಾವುದೇ ಕ್ರಮ ಜರುಗಿಸದ ಟಿ.ನರಸೀಪುರ ತಾಲ್ಲೂಕಿನ ಅಂದಿನ ತಹಶೀಲ್ದಾರಾದ ಶ್ರೀಮತಿ.ಅರುಣಾ ಪ್ರಭ, ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾಗಿದ್ದ ಶ್ರೀ.ವೆಂಕಟೇಶ್, ಆಹಾರ ಶಿರಸ್ತೇದಾರರಾದ ಶ್ರೀಮತಿ.ಬಿ.ಸಿ.ಚಿತ್ರ, ಆಹಾರ ನಿರೀಕ್ಷಕರಾದ ಶ್ರೀ.ಜೆ.ಸುರೇಶ್ ಮತ್ತು ಶ್ರೀ.ಕೆಂಚೇಗೌಡ ಹಾಗೂ ಟಿ.ನರಸೀಪುರ ಕೆಎಸ್‌ಎಫ್‌ಸಿ ಸಗಟು ಕೇಂದ್ರದ ನಿರ್ವಾಹಕ ಶ್ರೀ.ಎಂ.ಜೆ.ಮಹದೇವ ರವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳಡಿಯಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಲು ಮತ್ತು ಜಂಟಿ ವಿಚಾರಣೆ ನಂತರ ಕಾನೂನು ಕ್ರಮ ಜರುಗಿಸಬಹುದೆಂದು ಶಿಫಾರಸ್ಸು ಮಾಡಿದೆಯೆಂದು ಹೇಳಿದ್ದಾರೆ.

4. ತನಿಖಾಧಿಕಾರಿಗಳ ವರದಿಯ ಆಧಾರದ ಮೇಲೆ ಖಂಡಿಕೆ-5ರಲ್ಲಿ ಹೆಸರಿಸಿದ ಅಧಿಕಾರಿಗಳನ್ನು ಎದುರುದಾರರೆಂದು ಮುಖಪುಟದಲ್ಲಿ ಸೇರಿಸಿ, ಅವರ ಆಕ್ಷೇಪಣೆಗಳನ್ನು ಕೇಳಲಾಗಿ, ಎದುರುದಾರರಾದ ಶ್ರೀಮತಿ.ಅರುಣಾ ಪ್ರಭ ರವರು ತಮ್ಮ ಆಕ್ಷೇಪಣೆಯಲ್ಲಿ –

ತಾವು ಟಿ.ನರಸೀಪುರ ತಾಲ್ಲೂಕಿನಲ್ಲಿ ದಿ:14/03/13 ರಿಂದ 21/05/14ರವರೆಗೆ ತಹಶೀಲ್ದಾರಾಗಿ ಕಾರ್ಯನಿರ್ವಹಿಸಿದ್ದು, ಆ ಸಮಯದಲ್ಲಿ ಟಿ.ನರಸೀಪುರ ತಾಲ್ಲೂಕ್ ಕಸಬಾ ಹೋಬಳಿ ಹೊಸ ಕೆಂಪಯ್ಯನ ಹುಂಡಿ ನ್ಯಾಯಬೆಲೆ ಅಂಗಡಿಯ ಶ್ರೀ.ಮಹದೇವಣ್ಣ ಮತ್ತು ಸಾರ್ವಜನಿಕರು ಆ ಅಂಗಡಿಯಲ್ಲಿ ಅವ್ಯವಹಾರ ನಡೆಯುತ್ತಿದೆಯೆಂದು ದೂರು ನೀಡಿದ್ದು, ವಿಷಯವನ್ನು ಪರಿಶೀಲಿಸಿದಾಗ, ಶ್ರೀ.ಎಸ್.ರಾಮು ರವರು ಮೃತರಾದ ನಂತರ ಅವರ ಹೆಸರಿನಲ್ಲಿ ಅವರ ಪತ್ನಿ ಅಂಗಡಿಯನ್ನು ನಡೆಸುತ್ತಿದ್ದಾರೆಂದು ಹೇಳಿದ್ದಾರೆ. ಆದರೆ, ಅಂಗಡಿಯನ್ನು ಫರ್ಯಾಯ ವ್ಯವಸ್ಥೆ ತಾತ್ಕಾಲಿಕವಾಗಿ ಪಡಿತರ ವಿತರಣೆ ಮಾಡಲು ಶ್ರೀ.ಎಂ.ಶಿವಪ್ರಸಾದ್ ನ್ಯಾಯಬೆಲೆ ಅಂಗಡಿಯವರಿಗೆ ನೀಡಿದ ಬಗ್ಗೆ ಅಧಿಕೃತ ದಾಖಲೆ ತಾಲ್ಲೂಕ್ ಕಛೇರಿಯಲ್ಲಿ ಲಭ್ಯವಿಲ್ಲದ ಕಾರಣ ದಿ:19/07/13ರಂದು ಇನ್ನೊಂದು ನ್ಯಾಯಬೆಲೆ ಅಂಗಡಿಗೆ ಫರ್ಯಾಯ ವ್ಯವಸ್ಥೆ ಮಾಡಿದೆ. ಅಲ್ಲದೇ ಶ್ರೀ.ಎಸ್.ರಾಮು ರವರ ಪತ್ನಿ ಶ್ರೀಮತಿ.ನಾಗರತ್ನಮ್ಮ ರವರು ಅನುಕಂಪದ ಆಧಾರದ ಮೇಲೆ ಪ್ರಾಧಿಕಾರವನ್ನು ಮಂಜೂರು ಮಾಡಲು ಕೇಳಿರುವ ವರದಿ ಮೇಲೆ, ಸದರಿಯವರು 10 ತಿಂಗಳು ಅನಧಿಕೃವಾಗಿ ನ್ಯಾಯ ಬೆಲೆ ಅಂಗಡಿ ಆಹಾರ ಪದಾರ್ಥಗಳನ್ನು ಹಂಚಿರುವ ಬಗ್ಗೆ ಶಿಸ್ತು ಕ್ರಮಕ್ಕಾಗಿ ದಿ:21/12/13 ರಂದು ಆಹಾರ ಉಪನಿರ್ದೇಶಕರು, ಮೈಸೂರು ಜಿಲ್ಲೆ ರವರಿಗೆ ಶಿಫಾರಸ್ಸು ಮಾಡಿದೆ. ತದನಂತರ, ತನಿಖೆ ನಡೆಸಿ ವರದಿ ನೀಡುವಂತೆ ಆಹಾರ ಶಿರಸ್ತೇದಾರರಾದ ಶ್ರೀಮತಿ.ಬಿ.ಸಿ.ಚಿತ್ರ ಮತ್ತು ಆಹಾರ ನಿರೀಕ್ಷಕರಾದ ಶ್ರೀ.ಜೆ.ಸುರೇಶ್ ರವರಿಗೆ ತಿಳಿಸಿದ ಮೇರೆಗೆ ಸದರಿಯವರು ತನಿಖೆ ನಡೆಸಿ, ಶ್ರೀ.ಎಂ.ಶಿವಪ್ರಸಾದ್ ಪರ್ಯಾಯ ವ್ಯವಸ್ಥೆ ನಡೆಸುವ ಸಮಯದಲ್ಲಿ ಯಾವುದೇ ಅವ್ಯವಹಾರ ನಡೆಸಿಲ್ಲವೆಂದು ಲಿಖಿತ ವರದಿಯನ್ನು ನೀಡಿದ್ದಾರೆ.

ಆದಕಾರಣ, ಶ್ರೀ.ಎಂ.ಶಿವಪ್ರಸಾದ್ ಪಡಿತರ ವಿತರಣೆಯಲ್ಲಿ ಯಾವುದೇ ಅವ್ಯವಹಾರ ನಡೆಸಿಲ್ಲವೆಂದು ಉಪ ನಿರ್ದೇಶಕರಿಗೆ ವರದಿ ನೀಡಿದೆ. ಮೊದಲನೇ ವರದಿ ಅಪೂರ್ಣ ಎಂದು ತಿಳಿಸಿ, ಇನ್ನೊಂದು ವರದಿಯನ್ನು ನೀಡಲು ಹೇಳಿದ್ದು, ಶ್ರೀ.ಎಂ.ಶಿವಪ್ರಸಾದ್ ಮತ್ತು ದೂರುದಾರರಾದ ಶ್ರೀ.ಮಹದೇವಣ್ಣ ರವರ ಮದ್ಯೆ ಇರುವ ವೈಯಕ್ತಿಕ ದ್ವೇಷಕ್ಕೆ ತಮ್ಮನ್ನು ಬಳಸಿಕೊಳ್ಳುತ್ತಿದ್ದಾರೆಂದು ತಿಳಿಯಿತು. ತಾವು ಆಹಾರ ಉಪನಿರ್ದೇಶಕರಿಗೆ 2ನೇ ವರದಿ ನೀಡುವ ಸಮಯದಲ್ಲಿ ಆಹಾರ ಶಿರಸ್ತೇದಾರರಾದ ಶ್ರೀಮತಿ.ಬಿ.ಸಿ.ಚಿತ್ರ ರವರು ತಾಲ್ಲೂಕ್ ಪಂಚಾಯತ್ ಕಡತದಿಂದ ದಿ:09/10/12ರಂದು ಕಸಬಾ ಹೋಬಳಿ ಹೊಸ ಕೆಂಪಯ್ಯನ ಹುಂಡಿ ನ್ಯಾಯಬೆಲೆ ಅಂಗಡಿ ಮಾಲೀಕರಾದ ಶ್ರೀ.ರಾಮರಾವ್ ರವರು ಮೃತರಾದ ಸಮಯದಲ್ಲಿ ಪರ್ಯಾಯ ವ್ಯವಸ್ಥೆಯಾಗಿ ಶ್ರೀ.ಶಿವಪ್ರಸಾದ್ ನ್ಯಾಯಬೆಲೆ ಅಂಗಡಿಯವರಿಗೆ ವಿತರಣೆ ಮಾಡಲು ನೀಡಿದ ಆದೇಶವನ್ನು ಕೊಟ್ಟಿರುತ್ತಾರೆ. ಹಿರಿಯ ಉಪ ನಿರ್ದೇಶಕರಾದ ಶ್ರೀ.ರಾಮೇಶ್ವರಪ್ಪ ರವರು ತಮಗೆ ಒತ್ತಡ ಹಾಕಿ ಶ್ರೀ.ಎಂ.ಶಿವಪ್ರಸಾದ್ ವಿರುದ್ಧ ವರದಿ ನೀಡಲು ತಿಳಿಸಿದ್ದು, ಅವರ ಉದ್ದೇಶದಂತೆ ವರದಿ ನೀಡದಿದ್ದ ಕಾರಣ ತಾವು ಶ್ರೀ.ಶಿವಪ್ರಸಾದ್ ನ್ಯಾಯಬೆಲೆ ಅಂಗಡಿ ಮಾಲೀಕರ ವಿರುದ್ಧ ಕ್ರಮ ತೆಗೆದುಕೊಂಡಿಲ್ಲವೆಂದು ಸುಳ್ಳು ಆರೋಪ ಹೊರಿಸಿದ್ದಾರೆಂದು ಹೇಳಿದ್ದಾರೆ.

5. ಇನ್ನೋರ್ವ ಎದುರುದಾರರಾದ ಶ್ರೀ.ವೆಂಕಟೇಶ್ ರವರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿ:19/01/12 ರಿಂದ 27/01/12 ಮತ್ತು 22/2/12 ರಿಂದ 2/9/13ರವರೆಗೆ ಟಿ.ನರಸೀಪುರ ತಾಲ್ಲೂಕ್ ಪಂಚಾಯತ್‌ನ ಕಾರ್ಯನಿರ್ವಹಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದು, ಆ ಅವಧಿಯಲ್ಲಿ ಹೊಸ ಕೆಂಪಯ್ಯನ ಹುಂಡಿ ನ್ಯಾಯಬೆಲೆ ಅಂಗಡಿಯ ಮಾಲೀಕರಾದ ಎಸ್.ರಾಮು ರವರು ನಿಧನ ಹೊಂದಿದ ಬಗ್ಗೆ ಆಹಾರ ನಿರೀಕ್ಷಕರು ದಿ:08/10/12ರಂದು ಸಲ್ಲಿಸಿದ ವರದಿಯನುಸಾರ ಬಂಗೂ ಪಡಿತರ ಚೀಟಿದಾರರ ಹಿತದೃಷ್ಟಿಯಿಂದ ಮತ್ತು ಸರ್ಕಾರದ ಆದೇಶ ಸಂ:ಆನಾಸ. ಡಿಆರ್‌ಎ 2004 ಬೆಂಗಳೂರು ದಿ:12/07/05ರನ್ವಯ ತಮಗಿರುವ ಅಧಿಕಾರವನ್ನು ಚಲಾಯಿಸಿ ಎಸ್.ರಾಮು ನ್ಯಾಯಬೆಲೆ ಅಂಗಡಿಯ ಪಡಿತರ ಹಂಚಿಕೆಯನ್ನು ತಾತ್ಕಾಲಿಕವಾಗಿ ಅತೀ ಸಮೀಪದ ಕೆಂಪಯ್ಯನ ಹುಂಡಿ ಗ್ರಾಮದಲ್ಲಿ ಅಧಿಕಾರ ಪತ್ರ ಪಡೆದು ನ್ಯಾಯ ಬೆಲೆ ಅಂಗಡಿ ನಡೆಸುತ್ತಿರುವ ಶ್ರೀ.ಎಂ.ಶಿವಪ್ರಸಾದ್ ಅಂಗಡಿಯ ಮೂಲಕ ಪರ್ಯಾಯ ವ್ಯವಸ್ಥೆ ಅಡಿ, ತಾತ್ಕಾಲಿಕವಾಗಿ ಪಡಿತರ ವಿತರಿಸಲು ದಿ:08/10/12ರಂದು ಅಧಿಕೃತ ಜ್ಞಾಪನದ ಮೂಲಕ ಆದೇಶ ಮಾಡಿದೆ. ಸದರಿ ಆದೇಶ ತಾತ್ಕಾಲಿಕವಾಗಿದ್ದು, ಘಟನೋತ್ತರ ಮಂಜೂರಾತಿಗಾಗಿ ಆಹಾರ ಇಲಾಖೆಯ ಉಪ ನಿರ್ದೇಶಕರ ಕಛೇರಿಗೆ ಸಲ್ಲಿಸಿದೆ. 600ಕ್ಕೂ ಹೆಚ್ಚು ಪಡಿತರ ಕುಟುಂಬಗಳಿಗೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ಪರ್ಯಾಯ ವ್ಯವಸ್ಥೆ ಆದೇಶವನ್ನು ಹೊರಡಿಸಿದೆ. ಸದರಿ ಆದೇಶ ದೋಷದಿಂದ ಕೂಡಿದೆಯೆಂದು ತನಿಖಾಧಿಕಾರಿಗಳ ವರದಿ ಸತ್ಯಕ್ಕೆ ದೂರವಾದ ಆರೋಪವಾಗಿದೆ. ಸದರಿ

ತನಿಖಾಧಿಕಾರಿ ಈ ಹಿಂದಿನಿಂದಲೂ ತಮ್ಮ ಸೇವಾವಧಿಯ ಉದ್ದಕ್ಕೂ ಅನೇಕ ಗುರುತರ ಆಪಾದನೆಗಳನ್ನು ಹೊತ್ತಿರುವ ಓರ್ವ ಕಳಂಕಿತ ಅಧಿಕಾರಿಯಾಗಿದ್ದು, ತಮ್ಮ ಸ್ವಾರ್ಥ ಸಾಧನೆಗಾಗಿ ದೂರುದಾರರು ಮತ್ತು ಇತರರೊಂದಿಗೆ ಸೇರಿಕೊಂಡು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ದೋಷಪೂರಿತ ವರದಿಯನ್ನು ಸಲ್ಲಿಸಿರುವುದಾಗಿ ಹೇಳಿದ್ದಾರೆ.

6. ಇನ್ನೋರ್ವ ಎದುರುದಾರರಾದ ಶ್ರೀಮತಿ.ಬಿ.ಸಿ.ಚಿತ್ರಾ ರವರು ತಮ್ಮ ಆಕ್ಷೇಪಣೆಯಲ್ಲಿ, ಶ್ರೀಮತಿ.ಅರುಣಪ್ರಭಾ ಮತ್ತು ಶ್ರೀ.ವೆಂಕಟೇಶ್ ರವರು ತಮ್ಮ ಆಕ್ಷೇಪಣೆಯಲ್ಲಿ ಹೇಳಿರುವ ಅಂಶಗಳನ್ನೇ ಪುನರುಚ್ಛರಿಸಿರುತ್ತಾರೆ.

7. ಮತ್ತೋರ್ವ ಎದುರುದಾರರಾದ ಶ್ರೀ.ಜೆ.ಸುರೇಶ್ ರವರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿ:20/04/13 ರಿಂದ 22/06/13ರವರೆಗೆ ಹೊಸ ಕೆಂಪಯ್ಯನ ಹುಂಡಿ ನ್ಯಾಯಬೆಲೆ ಅಂಗಡಿಗೆ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಚಿಲ್ಲರೆ ಹಂಚಿಕೆ ಆದೇಶದಂತೆ ಪಡಿತರಗಳನ್ನು ಎತ್ತುವಳಿ ಮಾಡಿಸಿ, ಪಡಿತರ ದಾಸ್ತಾನನ್ನು ಹೊಸ ಕೆಂಪಯ್ಯನ ಹುಂಡಿ ಗ್ರಾಮಕ್ಕೆ ತಲುಪಿಸಿ, ಪಡಿತರ ಚೀಟಿದಾರರಿಂದ ಮಹಜರ್ ಪಡೆದು ಅಧಿಕೃತ ಬಿಲ್ಲಿಗೆ ನ್ಯಾಯಬೆಲೆ ಅಂಗಡಿ ಮಾಲೀಕರಿಂದ ಸಹಿ ಪಡೆದು, ಪ್ರತಿ ತಿಂಗಳು ಕಛೇರಿಗೆ ವರದಿ ಸಲ್ಲಿಸಿದೆ. ಪಡಿತರ ವಿತರಣೆಯ ದುರುಪಯೋಗದ ಬಗ್ಗೆ ತಮ್ಮ ಕಛೇರಿಗೆ ಯಾವುದೇ ದೂರುಗಳು ಸ್ವೀಕೃತವಾಗಿಲ್ಲ. ತಮ್ಮಿಂದ ಯಾವುದೇ ಕರ್ತವ್ಯ ಲೋಪ ಆಗಿಲ್ಲವೆಂದು ಹೇಳಿದ್ದಾರೆ.

8. ಮತ್ತೋರ್ವ ಎದುರುದಾರರಾದ ಶ್ರೀ.ಕೆಂಚೇಗೌಡ ರವರು ತಮ್ಮ ಆಕ್ಷೇಪಣೆಯಲ್ಲಿ –

ಹಳೇ ಕೆಂಪಯ್ಯನ ಹುಂಡಿ ನ್ಯಾಯಬೆಲೆ ಅಂಗಡಿ ಸಂಖ್ಯೆ.35ರಲ್ಲಿ ಹಂಚಿಕೆಯಾದ ಪಡಿತರ ವಿತರಣೆಯಲ್ಲಿ ನಡೆದಿದೆ ಎನ್ನಲಾದ ದುರುಪಯೋಗದಲ್ಲಿ ತಮ್ಮ ಪಾತ್ರ ಇಲ್ಲ ಹಾಗೂ ತಾವು ಯಾವುದೇ ಸರ್ಕಾರಿ ದಾಖಲೆಗಳನ್ನು ತಿದ್ದಿಲ್ಲ. ದಿನಾಂಕ:26/09/12ರಂದು ಎಸ್.ರಾಮು ನ್ಯಾಯಬೆಲೆ ಅಂಗಡಿಯ ಮಾಲೀಕರು ಮೃತರಾಗಿದ್ದು, ಅವರ ಅಕಾಲಿಕ ಮರಣದಿಂದ ಸೃಷ್ಟಿಯಾಗಬಹುದಾದ ಪಡಿತರ ವ್ಯತ್ಯಯವನ್ನು ತಪ್ಪಿಸಲು ತಾವು ಮೇಲಾಧಿಕಾರಿಗಳ ಮೌಖಿಕ ಆದೇಶದಂತೆ ವರದಿಯನ್ನು ಸಿದ್ಧಪಡಿಸಿ ದಿ:08/01/12ರಂದು ತಹಶೀಲ್ದಾರ್ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸಿದೆ. ಸದರಿ ವರದಿಯು ನಿಯಮಾನುಸಾರ ಸಿದ್ಧಪಡಿಸಿದ್ದು, ಅದರಂತೆ ಮೇಲಾಧಿಕಾರಿಗಳು ಆದೇಶ ಮಾಡಿದ್ದಾರೆ.

ಎಸ್.ರಾಮು ರವರ ನಿಧನಾನಂತರ ಶ್ರೀ.ಎಂ.ಶಿವಪ್ರಸಾದ್ ರವರಿಗೆ ಪಡಿತರ ಹಂಚಿಕೆಯನ್ನು ಹಸ್ತಾಂತರಿಸಿರುವುದು ಕ್ರಮ ಬದ್ಧವಾಗಿದ್ದು, ಇದರಲ್ಲಿ ಯಾವುದೇ ನ್ಯೂನತೆ ಇಲ್ಲ. ತನಿಖಾಧಿಕಾರಿಗಳ ವರದಿಯಲ್ಲಿ ತಮ್ಮ ವಿರುದ್ಧ ಮಾಡಿದ ಎಲ್ಲಾ ಆರೋಪ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲಾ ಶಿಫಾರಸ್ಸುಗಳು ಕಾನೂನುಬಾಹಿರವಾಗಿದ್ದು, ತಮ್ಮಿಂದ ಸರ್ಕಾರಕ್ಕೆ ಯಾವುದೇ ನಷ್ಟ ಆಗಿಲ್ಲ. ತಮ್ಮ ವಿರುದ್ಧ ಮಾಡಿದ ನಿರಾಧಾರ ಆರೋಪಗಳಿಂದ ಮನನೊಂದಿರುವುದಾಗಿ ಹೇಳಿದ್ದಾರೆ.

9. ಎದುರುದಾರರಾದ ಶ್ರೀ.ಎಂ.ಜೆ.ಮಹದೇವ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

10. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಶ್ರೀ.ಎಂ.ಶಿವಪ್ರಸಾದ ರವರು ನ್ಯಾಯಬೆಲೆ ಅಂಗಡಿ ಸಂಖ್ಯೆ.35 ಅನ್ನು ಹಳೇ ಕೆಂಪಯ್ಯನ ಹುಂಡಿ ಯಲ್ಲಿ ನಡೆಸುತ್ತಿದ್ದು, ಅವರು ನಡೆಸಿದ ಅವ್ಯವಹಾರದ ಬಗ್ಗೆ ಆಹಾರ ಇಲಾಖೆಯ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲವೆಂದು ದೂರಿನ ಆಪಾದನೆಯಾಗಿದೆ. ಇದೇ ದೂರಿನ ವಿಷಯವಾಗಿ ಹಿರಿಯ ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು, ಗ್ರಾಹಕರ ಇಲಾಖೆ, ಮೈಸೂರು ರವರು ದಿ:04/03/15ರಂದು ಮೈಸೂರು ಜಿಲ್ಲಾಧಿಕಾರಿಗಳಿಗೆ ತನಿಖಾ ವರದಿಯನ್ನು ಸಲ್ಲಿಸಿದ್ದಾರೆ. ಸದರಿ ತನಿಖಾ ವರದಿಯಲ್ಲಿ ಶ್ರೀ.ಎಂ.ಶಿವಪ್ರಸಾದ ರವರು ಶ್ರೀ.ಬಿ.ಕುಮಾರ್ ಮತ್ತು ಶ್ರೀ.ಎಂ.ಬಸವರಾಜು ರವರೊಂದಿಗೆ ಸೇರಿ ವ್ಯವಸ್ಥಿತ ಸಂಚು ನಡೆಸಿ, ಕಾನೂನುಬಾಹಿರವಾಗಿ ಮತ್ತು ಅಕ್ರಮವಾಗಿ ಪಡಿತರ ವಸ್ತುಗಳನ್ನು ಟಿ.ನರಸೀಪುರ ಸಗಟು ಕೇಂದ್ರದಿಂದ ಎತ್ತುವಳಿ ಮಾಡಿ, ಆ ರೀತಿ ಎತ್ತುವಳಿ ಮಾಡಿರುವ ಅಕ್ಕಿ, ಗೋಧಿ, ಸಕ್ಕರೆ, ಸೀಮೆ ಎಣ್ಣೆಯನ್ನು ಪ್ರತಿ ಮಾಹೆ ಪಡಿತರ ಚೀಟಿದಾರರಿಗೆ ವಿತರಿಸದೇ, ವಿತರಿಸಿದಂತೆ ತೋರಿಸಿ, ಪಡಿತರ ವಸ್ತುಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿ, ಪಡಿತರ ಚೀಟಿದಾರರಿಗೆ ಅನ್ಯಾಯ ಎಸಗಿದ್ದಲ್ಲದೆ, ಸುಳ್ಳು ಲೆಕ್ಕ ಸೃಷ್ಟಿಸಿದ್ದಾರೆ. ಸದರಿಯವರ ಅಕ್ರಮದ ಬಗ್ಗೆ ದೂರು ಸಲ್ಲಿಕೆಯಾದರೂ ಯಾವುದೇ ಕ್ರಮ ಕೈಗೊಳ್ಳದ ಎದುರುದಾರರುಗಳ ವಿರುದ್ಧ ಜಂಟಿ ವಿಚಾರಣೆ ನಡೆಸಲು ಸರ್ಕಾರಕ್ಕೆ ವರದಿ ಸಲ್ಲಿಸಿ, ಜಂಟಿ ವಿಚಾರಣೆ ನಂತರ ಕಾನೂನು ಕ್ರಮ ಜರುಗಿಸಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ. ಮುಂದುವರೆದು, ಶ್ರೀ.ಎಂ.ಶಿವಪ್ರಸಾದ ರವರು ಮತ್ತು ಇನ್ನಿಬ್ಬರ ವಿರುದ್ಧ ಕಾನೂನು ಕ್ರಮ ಜರುಗಿಸಲು ಹಾಗೂ ಶ್ರೀ.ಎಂ.ಶಿವಪ್ರಸಾದ ರವರಿಗೆ ಹಳೇ ಕೆಂಪಯ್ಯನ ಹುಂಡಿ ಯಲ್ಲಿ ನ್ಯಾಯಬೆಲೆ ಅಂಗಡಿ ನಡೆಸಲು ನೀಡಿದ ಪರವಾನಿಗೆಯನ್ನು ರದ್ದುಪಡಿಸಬಹುದೆಂದು ಶಿಫಾರಸ್ಸು ಮಾಡಿದೆ;

2) ತನಿಖಾ ವರದಿಯ ಆಧಾರದ ಮೇಲೆ ಮೈಸೂರು ಜಿಲ್ಲಾಧಿಕಾರಿಗಳು ದಿನಾಂಕ:11/03/15ರಂದು ಎದುರುದಾರರುಗಳ ವಿರುದ್ಧ ಕೆಸಿಎಸ್ (ಸಿಸಿಎ) ನಿಯಮಗಳಡಿಯಲ್ಲಿ ಜಂಟಿ ವಿಚಾರಣೆ ನಡೆಸಿ, ವಿಚಾರಣಾ ನಂತರ ಕಾನೂನು ಕ್ರಮ ಜರುಗಿಸುವಂತೆ ಶಿಫಾರಸ್ಸು ಮಾಡಿ, ಸರ್ಕಾರಕ್ಕೆ ವರದಿಯನ್ನು

ಕಳುಹಿಸಲು ಆದೇಶಿಸಿದ್ದಾರೆ. ಸದರಿಯವರುಗಳ ವಿರುದ್ಧ ಕೆಸಿಎಸ್ (ಸಿಸಿಎ) ನಿಯಮಗಳಡಿಯಲ್ಲಿ ಜಂಟಿ ವಿಚಾರಣೆ ನಡೆಸಿ, ವಿಚಾರಣಾ ನಂತರ ಕಾನೂನು ಕ್ರಮ ಜರುಗಿಸುವಂತೆ ಶಿಫಾರಸ್ಸು ಮಾಡಿ, ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದೆಯೆಂದು ಆಯುಕ್ತರು, ಆಹಾರ, ನಾಗರೀಕ ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಬೆಂಗಳೂರು ರವರು ದಿ:31/05/17 ಮತ್ತು 10/07/17ರ ಪತ್ರಗಳಲ್ಲಿ ಹೇಳಿದೆ. ಆದರೆ, ಎದುರುದಾರರುಗಳಾದ ಶ್ರೀಮತಿ.ಬಿ.ಸಿ.ಚಿತ್ರಾ ಮತ್ತು ಶ್ರೀ.ಕೆಂಚೇಗೌಡ ರವರು ಸೇವೆಯಿಂದ ವಯೋ ನಿವೃತ್ತರಾಗಿರುವುದರಿಂದ, ಸದರಿಯವರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕೆಸಿಎಸ್ (ಸಿಸಿಎ) ನಿಯಮ 214(2)(ಬಿ) ರಂತೆ ಸರ್ಕಾರದ ಅನುಮತಿ ಬರಲು ಬಾಕಿ ಇದೆಯೆಂದು ಹೇಳಿದ್ದಾರೆ. ಆದರೆ, ಸದರಿ ಜಂಟಿ ಇಲಾಖಾ ವಿಚಾರಣೆಯ ಬಗ್ಗೆ ಈವರೆವಿಗೂ ಈ ಸಂಸ್ಥೆಗೆ ಯಾವುದೇ ಮಾಹಿತಿಯು ಬಂದಿಲ್ಲ.

3) ಮೈಸೂರು ಜಿಲ್ಲಾಧಿಕಾರಿಗಳ ಆದೇಶದಂತೆ, ದಿ:17/03/15ರಂದು ಶ್ರೀ.ಎಂ.ಶಿವಪ್ರಸಾದ, ಶ್ರೀ.ಬಿ.ಕುಮಾರ್ ಮತ್ತು ಶ್ರೀ.ಬಸವರಾಜ್.ಎಂ ರವರ ವಿರುದ್ಧ ಗ್ರಾಮಾಂತರ ಪೋಲೀಸ್ ಠಾಣೆ, ಟಿ.ನರಸೀಪುರ ದಲ್ಲಿ ದೂರು ಅಪರಾಧ ಸಂ:77/2015ರಂತೆ ಅವಶ್ಯಕ ವಸ್ತುಗಳ ಅಧಿನಿಯಮ ಕಲಂ 3 ಮತ್ತು 7 ಹಾಗೂ ಭಾರತೀಯ ದಂಡ ಸಂಹಿತೆ ಕಲಂ 120ಬಿ, 201, 403, 409, 420, 465 ಮತ್ತು 468 ಅಡಿ ಪ್ರಕರಣ ದಾಖಲಾಗಿದೆ;

4) ಹೊಸ ಕೆಂಪಯ್ಯನ ಹುಂಡಿಯ ಎಸ್.ರಾಮು ನ್ಯಾಯಬೆಲೆ ಅಂಗಡಿ ಸಂಖ್ಯೆ.36 (ಅಧಿಕಾರ ಪತ್ರ ಸಂ:30/94–95)ರ ಮಾಲೀಕರಾದ ಶ್ರೀ.ಎಸ್.ರಾಮು ರವರು ದಿ:26/09/12ರಂದು ಮೃತರಾದ ನಂತರ ಪಡಿತರ ಪರ್ಯಾಯ ವ್ಯವಸ್ಥೆ ಮೂಲಕ ಅಕ್ಟೋಬರ್, 2012 ರಿಂದ ಜೂನ್, 2013 ರವರೆಗಿನ 9 ತಿಂಗಳ ಪಡಿತರವನ್ನು ಶ್ರೀ.ಎಂ.ಶಿವಪ್ರಸಾದ್ ರವರು ಅಕ್ರಮವಾಗಿ ಎತ್ತುವಳಿ ಮಾಡಿದ್ದಾರೆಂದು ಹೇಳಿದ್ದು, ಶ್ರೀ.ಎಂ.ಶಿವಪ್ರಸಾದ್ ರವರ ಅಂಗಡಿಗೆ ಸದರಿ ಅವಧಿಯಲ್ಲಿ ಒಟ್ಟು 871.22 ಕ್ವಿಂಟಾಲ್ ಅಕ್ಕಿ, 146.63 ಕ್ವಿಂಟಾಲ್ ಗೋಧಿ ಮತ್ತು 30.06 ಕ್ವಿಂಟಾಲ್ ಸಕ್ಕರೆ ವಿತರಣೆಯಾಗಿದೆ. ಯಾವುದೇ ನ್ಯಾಯಬೆಲೆ ಅಂಗಡಿಗೆ ಮಂಜೂರಾತಿ ಅಥವಾ ಪರ್ಯಾಯ ವ್ಯವಸ್ಥೆಗೆ ಆದೇಶಿಸುವ ಅಧಿಕಾರ ಜಿಲ್ಲಾಧಿಕಾರಿಗಳಿಗಿದ್ದು, ಸದರಿ ಪ್ರಕರಣದಲ್ಲಿ ಶ್ರೀ.ಎಸ್.ರಾಮು ರವರು ಮೃತರಾದ ನಂತರ ಎದುರುದಾರರಾದ ಶ್ರೀ.ವೆಂಕಟೇಶ್ ರವರು ಪರ್ಯಾಯ ವ್ಯವಸ್ಥೆ ಮಾಡಿ ಆದೇಶವನ್ನು ಹೊರಡಿಸಿರುತ್ತಾರೆ. ಈ ಬಗ್ಗೆ ಸದರಿಯವರು ಎರಡು ವ್ಯತಿರಿಕ್ತ ವರದಿಗಳನ್ನು ದಿ:21/12/13 ಮತ್ತು 24/12/13ರಂದು ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಮೈಸೂರು ರವರಿಗೆ ಸಲ್ಲಿಸಿದ್ದಾರೆ. ಮೊದಲನೇ ವರದಿಯಲ್ಲಿ ದಿ:09/10/12ರ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ್ ಪಂಚಾಯತ್, ಟಿ.ನರಸೀಪುರ ತಾಲ್ಲೂಕ್ ರವರ ಅಧಿಕೃತ ಜ್ಞಾಪನದ ಉಲ್ಲೇಖವಿಲ್ಲ. ಆದಕಾರಣ, ದಿ:09/10/12ರ ಅಧಿಕೃತ ಜ್ಞಾಪನವನ್ನು ಎದುರುದಾರರಾದ ಶ್ರೀ.ವೆಂಕಟೇಶ್ ರವರು ತದನಂತರ ಸೃಷ್ಟಿಸಿಕೊಂಡಿರುವ ದಾಖಲೆಯೆಂದು ಹಿರಿಯ ಉಪ ನಿರ್ದೇಶಕರು, ಆಹಾರ ಮತ್ತು

ನಾಗರೀಕ ಸರಬರಾಜು ಇಲಾಖೆ, ಮೈಸೂರು ರವರು ತಮ್ಮ ತನಿಖಾ ವರದಿಯಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

5) ಟಿ.ನರಸೀಪುರದ ಕೆಎಫ್‌ಸಿಎಸ್‌ಸಿ ಸಗಟು ಕೇಂದ್ರದ ನಿರ್ವಾಹಕರಾದ ಎದುರುದಾರರಾದ ಶ್ರೀ.ಎಂ.ಜೆ.ಮಹದೇವ ರವರು ಅಕ್ಟೋಬರ್, 2012 ರಿಂದ ಜೂನ್, 2013ರ ಅವಧಿಯಲ್ಲಿ ಅಂದರೆ, 9 ತಿಂಗಳು ನೀಡಲಾಗಿರುವ ಸಗಟು ಮಾರಾಟ ಮತ್ತು ಸಗಟು ವಿತರಣಾ ಚಲನ್‌ಗಳ ಬಿಲ್ಲುಗಳಿಗೆ ಸಹಿ ಮಾಡಿದ್ದಾರೆ. ಶ್ರೀ.ಎಂ.ಶಿವಪ್ರಸಾದ್ ರವರು ಶ್ರೀ.ಬಿ.ಕುಮಾರ್ ಮತ್ತು ಶ್ರೀ.ಎಂ.ಬಸವರಾಜು ರವರೊಂದಿಗೆ ಎದುರುದಾರರುಗಳಾದ ಶ್ರೀ.ಜೆ.ಸುರೇಶ್, ಶ್ರೀ.ಕೆಂಚೇಗೌಡ ಮತ್ತು ಶ್ರೀ.ಎಂ.ಜೆ.ಮಹದೇವ ರವರು ಸೇರಿಕೊಂಡು ಸರ್ಕಾರ ನೀಡುವ ಪಡಿತರವನ್ನು ಅಕ್ರಮವಾಗಿ ಮತ್ತು ನಿಯಮಬಾಹಿರವಾಗಿ ಎತ್ತುವಳಿ ಮಾಡಿದ್ದಾರೆಂದು ಹಿರಿಯ ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಮೈಸೂರು ರವರು ತಮ್ಮ ತನಿಖಾ ವರದಿಯಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ಶ್ರೀ.ಎಂ.ಶಿವಪ್ರಸಾದ್, ಶ್ರೀ.ಬಿ.ಕುಮಾರ್ ಮತ್ತು ಶ್ರೀ.ಎಂ.ಬಸವರಾಜು ರವರು ಎಸ್.ರಾಮು ನ್ಯಾಯಬೆಲೆ ಅಂಗಡಿ ಪಡಿತರವನ್ನು ದುರುಪಯೋಗ ಮಾಡಿಕೊಂಡ ಬಗ್ಗೆ ಸಾರ್ವಜನಿಕರಿಂದ ದೂರು ಬಂದಿದ್ದರೂ, ಎದುರುದಾರರುಗಳು ದೂರಿನ ತನಿಖೆ ನಡೆಸದೇ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

11. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಎದುರುದಾರರುಗಳು ನೀಡಿರುವ ಆಕ್ಷೇಪಣೆ ಮತ್ತು ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರುಗಳು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

12. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರುಗಳು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

13. ಅದಲ್ಲದೆ ಎದುರದಾರರುಗಳು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ,

ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ. ಎದುರುದಾರರುಗಳ ಪೈಕಿ ಶ್ರೀಮತಿ.ಬಿ.ಸಿ.ಚಿತ್ರಾ ಮತ್ತು ಶ್ರೀ.ಕೆಂಚೇಗೌಡ ರವರುಗಳು ದಿ:31/05/2015 ರಂದು ಸೇವೆಯಿಂದ ವಯೋನಿವೃತ್ತರಾಗಿದ್ದು, ಸದರಿಯವರುಗಳ ವಿರುದ್ಧ ವಿಚಾರಣೆ ನಡೆಸಲು ಕೆಸಿಎಸ್ ನಿಯಮ 214(2)(ಬಿ) ಅಡಿಯಲ್ಲಿ ಅನುಮತಿಯನ್ನು ಹಾಗೂ ಎದುರದಾರರುಗಳ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಕೋರಿದೆ.

14. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

(ನ್ಯಾಯಮೂರ್ತಿ ಎನ್.ಆನಂದ)
ಉಪಲೋಕಾಯುಕ್ತ-1,
ಕರ್ನಾಟಕ ರಾಜ್ಯ.